**I ನೇ ಹೆಚ್ಚುವರಿ ನ್ಯಾಯಾಲಯ ಹಾಗೂ ಜೆ ಎಮ್ ಎಫ್ ಸಿ, ಬೆಳಗಾವಿ**

| | | |
|---|---|---|
| ಹೆಸರು | ಮಂಗಲ ನಾಯಕ | O.S.No.1011/2016 |
| ವಾಸಸ್ಥಳ | ಬೆಳಗಾವಿ | ಪಿ ಡಬ್ಲ್ಯೂ 1 |

**ಪ್ರಮಾಣ ವಚನ ಭೋಧಿಸಿದ ದಿನಾಂಕಃ 29.11.2021.**

**ಪಾಟೀ ಸವಾಲು ಪ್ರತಿ ವಾದಿ ಪರ ವಕೀಲರು ಶ್ರೀ ಆರ ಎಲ ಪಿ ರವರಿಂದ**

(ಸಾಕ್ಷಿಯು ತನಗೆ ಮರಾಠಿ ಭಾಷೆ ಮಾತ್ರ ಬರುತ್ತದೆ ಎಂದು ಹೇಳಿರುತ್ತಾರೆ. ಕಾರಣ ಈ ಪ್ರಕರಣದಲ್ಲಿ ಮರಾಠಿ ಭಾಷೆಯಿಂದ ಕನ್ನಡ ಭಾಷೆಗೆ ತರ್ಜುಮೆ ಮಾಡುವ ತರ್ಜಮೆಗಾರರ ಅವಶ್ಯಕತೆ ಇರುತ್ತದೆ. ಶ್ರೀ ಆರ್ ಪಿ ಎಂ ವಕೀಲರು ತಮಗೆ ಮರಾಠಿ ಹಾಗೂ ಕನ್ನಡ ಭಾಷೆಗಳು ತಿಳಿದಿದೆ ಎಂದು ಹೇಳಿರುವುದರಿಂದ ಸದರಿಯವರನ್ನು ತರ್ಜುಮೆಗಾರರು ಅಂತಾ ಈ ಪ್ರಕರಣದಲ್ಲಿ ನೇಮಕ ಮಾಡಲಾಯಿತು . ಸದರಿಯವರಿಗೆ ತರ್ಜುಮೆ ಫೀ 200 ರೂ. ಎಂದು ನಿಗದಿಸಲಾಯಿತು. ಸಾಕ್ಷಿಯು ಮರಾಠಿಯಲ್ಲಿ ಹೇಳಿದಂತೆ ಅದನ್ನು ಶ್ರೀ ಆರ್ ಪಿ ಎಂ ವಕೀಲರು ಕನ್ನಡದಲ್ಲಿ ತರ್ಜುವೆ ಮಾಡಿದಂತೆ ಕನ್ನಡದಲ್ಲಿ ಸಾಕ್ಷಿಯ ಪಾಟೀ ಸವಾಲನ್ನು ದಾಖಲಿಸಿಕೊಳ್ಳಲಾಯಿತು . )

1. ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಮರಾಠಿ ಭಾಷೆ ಮಾತ್ರ ಬರುತ್ತದೆ. ದಾವಾ ಆಸ್ತಿಯನ್ನು ಖರೀದಿಸುವುದಕ್ಕಿಂತ ಮೊದಲು

ನಾನು ದಡ್ಡಿ ಗ್ರಾಮದಲ್ಲಿ ಇದ್ದೇನು . ಸದರಿ ನಮ್ಮ ಮನೆಯನ್ನು ನಾನು 2004 ರಲ್ಲಿ ಖರೀದಿಸಿರುತ್ತೇನೆ. ನಾನು ದಾವಾ ಮನೆಯನ್ನು ಬಾಂಡ್ ಪತ್ರದ ಮೂಲಕ ಖರೀದಿಸಿರುತ್ತೇನೆ. ನಾನು ದಾವಾ ಮನೆಯನ್ನು ಖರೀದಿಸುವುದಕ್ಕಿಂತ ಮೊದಲು ಅಲ್ಲಿ ಪ್ರತಿವಾದಿಗಳ ಶೌಚಗೃಹ ಹಾಗೂ ಸ್ನಾನ ಗೃಹ ಇತ್ತು ಎಂದರೆ ಸರಿಯಲ್ಲ . ನಾನು ಮುಂದುವರೆದು ಹೇಳುತ್ತೇನೆ. ಪ್ರತಿವಾದಿಯವರು ಈಗ ಹೊಸದಾಗಿ ಶೌಚಗೃಹ ಹಾಗೂ ಸ್ನಾನ ಗೃಹವನ್ನು ಕಟ್ಟಿದ್ದಾರೆ . ನಾನು ಖರೀದಿಸಿದ ಆಸ್ತಿ ಮನೆಯ ಉದ್ದ 57.6 ಅಡಿ ಹಾಗೂ ಅಗಲ 40 ಅಡಿ ಆಗಿರುತ್ತದೆ. ನಾನು ದಾವಾ ಮನೆಯಲ್ಲಿ ವಾಸವಾಗಿರುತ್ತೇನೆ.

2. ನಾನು 2008 ನೇ ಇಸ್ವಿಯಲ್ಲಿ ದಾವಾ ಆಸ್ತಿಯಲ್ಲಿ ಹೊಸ ಮನೆಯನ್ನು ಕಟ್ಟಿರುತ್ತೇನೆ . ದಾವಾ ಆಸ್ತಿಯನ್ನು ಖರೀದಿಸಿದಾಗ ಇದ್ದ ವಿಸ್ತಿರ್ಣಕ್ಕಿಂತ ಹೆಚ್ಚಿನ ವಿಸ್ತಿರ್ಣದಲ್ಲಿ ಮನೆಯನ್ನು ಕಟ್ಟಿದ್ದೇನೆ ಎಂದರೆಸರಿಯಲ್ಲ . ನಾನು ಖರೀದಿಸಿದ ಆಸ್ತಿಗಿಂತಿ ಹೆಚ್ಚಿನ ವಿಸ್ತಿರ್ಣದಲ್ಲಿ ಮನೆಯನ್ನು ಕಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನುಹೊಸದಾಗಿ ಕಟ್ಟಿರುವ ಮನೆಯ ವಿಸ್ತಿರ್ಣ 40 ಅಡಿ x 21.5 ಅಡಿ ಅಗಲ ಇರುತ್ತದೆ . ನಾನು ಮನೆಯನ್ನು ಖರೀದಿಸುವುದಕ್ಕಿಂತ ಮೊದಲು ಒಂದು ಕಂಪೌಂಡ ವಾಲ್ ಅಲ್ಲಿ ಇತ್ತು ಎಂದರೆ ಸರಿಯಲ್ಲ . 2016 ನೇ ಇಸ್ವಿಯ ದಾವಾ ಆಸ್ತಿಯ ಕರ ಪಾವತಿಗಳನ್ನು

ಹಾಜರುಪಡಿಸಿರುತ್ತೇನೆ. ದಾವಾ ಮನೆ ನೆಲಮಹಡಿ, 1 ನೇ ಹಾಗೂ 2 ನೇ ಮಹಡಿಯನ್ನು ಹೊಂದಿದೆ . ನಾನು ದಾವಾ ಆಸ್ತಿಯನ್ನು ಕಟ್ಟುವಾಗಿ ಪಂಚಾಯತಿಯ ಅನುಮತಿಯನ್ನು ಪಡೆದಿದ್ದೇನೆ . ಪಂಚಾಯತಿಯಲ್ಲಿ ಲಿಖಿತ ರೂಪದಿಂದ ಅನುಮತಿಯನ್ನು ಪಡೆದಿಲ್ಲ. ದಾವಾ ಮನೆಯ ಪಶ್ಚಿಮಕ್ಕೆ ಮಾರುತಿ ನಾಯಕ ರವರ ಆಸ್ತಿ ಪೂರ್ವಕ್ಕೆ ಬಸವಣ್ಣೆ ನಾಯಕರವರ ಆಸ್ತಿ ಉತ್ತರಕ್ಕೆ ಬಾಬುಬಾಯಿ ನಾಯಕ ಅವರ ಆಸ್ತಿ ಹಾಗೂ ದಕ್ಷಿಣಕ್ಕೆ ಕಮಲಾಬಾಯಿ ಅವರ ಆಸ್ತಿ ಇರುತ್ತದೆ.

3. ದಾವಾಮನೆಯನ್ನು ಕಟ್ಟುವಾಗ ಸೆಟ್ ಬ್ಯಾಕ ಕ್ಷೇತ್ರ ಬಿಟ್ಟಿರುತ್ತೇವೆ . ಸದರಿ ಆ ರೀತಿ 2.5ft ಬಿಟ್ಟಿರುತ್ತೇವೆ. ಸದರಿ ಆ ರೀತಿ ಸೇಟ್ ಬ್ಯಾಕ ಬಿಟ್ಟಿರುವುದನ್ನು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ . ಈ ದಾವೆ ಹಾಕುವಾ ಸಲ್ಲಿಸುವ ಒಂದು septic tank ಪ್ರತಿವಾದಿಯವರು ಕಟ್ಟಲು ಪ್ರಾರಂಭಿಸಿದರು. ಅದಕ್ಕೆ ನಾನು ತಕರಾರು ಮಾಡಿರುತ್ತೇನೆ. ಸದರಿ septic tank ಮೊದಲಿನಿಂದಲೂ ಅಲ್ಲೇ ಇತ್ತು ಆದರೂ ನಾನು ಅವರು ದಾವಾ ಕಾಲಕ್ಕೆ ಕಟ್ಟುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳು ಹೊಸ septic tank ಕಟ್ಟುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆ ರೀತಿ septic tank

ಕಟ್ಟುತಿದ್ದಾರೆ ಎಂದು ಪಂಚಾಯತಿಗೆ ಹಾಗೂ ಪೊಲೀಸ್ ಠಾಣೆ ದೂರು ನೀಡಿರುತ್ತೇನೆ. ಪಂಚಾಯತಿಗೆ ನಾನೇ ಅರ್ಜಿ ನೀಡಿರುತ್ತೇನೆ. ಸದರಿ ಆ ರೀತಿ ನಾನು ನಿಶಾನೆ ಪಿ 2 ರಂತೆ ಪಂಚಾಯತಿಗೆ ದೂರು ನೀಡಿರುತ್ತೇನೆ. ನಿಶಾನೆ ಪಿ 2 ರ ದೂರು ನೀಡುವ ಕಾಲಕ್ಕೆ ಮಾರುತಿ ನಾಯಕ ಎಂಬುವವರು ದಾವಾ ಆಸ್ತಿಯ ಮಾಲೀಕರಾಗಿದ್ದಾರೆ ಎಂದರೆ ಸದರಿಯವರು ನನಗೆ ಜಿಪಿಎ ನೀಡಿದ್ದರು. ಸದರಿ ಆ ರೀತಿ ಜಿಪಿಎ ಎನ್ನು 2016 ರಲ್ಲಿ ನೀಡಿದ್ದರು.

**ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮೂಂದುವರೆದ ಪಾಟೀ ಸವಾಲಿಗೆ ಪ್ರಕರಣವನ್ನು ಮೂಂದುಡಲಾಯಿತು.**

(ತೆರೆದ ನ್ಯಾ. ಸಾಕ್ಷಿ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸರಿಯಿದೆ.**

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾ. ಹಾಗೂ
ಜೆ ಎಮ್ ಎಫ್ ಸಿ, ಬೆಳಗಾವಿ